ಶ್ರೀ ಸಿ.ಟಿ. ರವಿ : ..... ಕ್ಷೇತ್ರದಿಂದ ಬಂದಿರತಕ್ಕಂಥ ಕಾರ್ಮಿಕರು ಇವರಾಗಿದ್ದಾರೆ. ಅಲ್ಲೂ ಕೂಡ ರೋಗ ಹರಡಿದೆ. ದಾವಣಗೆರೆ ಆಸ್ಪತ್ರೆಯಲ್ಲಿ ಇಬ್ಬರು ತೀರಿಕೊಂಡಿದ್ದಾರೆ. ...

ಅಧ್ಯಕ್ಷರು : ರವಿಯವರೇ, ದಯಮಾಡಿ ಕುಳಿತುಕೊಳ್ಳಿ. ಎಷ್ಟು ಸಾರಿ ಕೇಳುತ್ತೀರಿ? ಈಗ ಪ್ರಭಾಕರ ಬಂಗೇರಾರವರು ತಮ್ಮ ವಿಷಯ ಪ್ರಸ್ತಾಪಿಸಿ.

ಶ್ರೀ ಸಿ.ಟಿ. ರವಿ : ನಾನು ಮಾತಿಗೋಸ್ಕರ ಮಾತನಾಡುತ್ತಿಲ್ಲ.

ಅಧ್ಯಕ್ಷರು : ಆಯಿತು, ದಯಮಾಡಿ ಕುಳಿತುಕೊಳ್ಳಿ. ಮತಿಗೋಸ್ಕರವೇ ನೀವು ಮಾತನಾಡುತ್ತಿರುವುದು. ಎಷ್ಟು ಸಾರಿ ನೀವು ಮಾತನಾಡುತ್ತೀರಿ?

8. ವಿಷಯ (ಉ): ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ಸಹಕಾರಿ ಸಾಲದ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ

ಶ್ರೀ ಕೆ. ಪ್ರಭಾಕರ ಬಂಗೇರಾ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ತೋಟ ನಷ್ಟವಾಗಿ ಗೋಪಾಲಕೃಷ್ಣ ಭಟ್ ಎಂಬುವವರು ತುಂಬಾ ನಷ್ಟ ಅನುಭವಿಸುತ್ತಿದ್ದು ಅವರ ಕುಟುಂಬ ಸಹಕಾರಿ ಸಾಲವನ್ನು ಕಟ್ಟಲಿಕ್ಕೆ ಸಾಧ್ಯವಾಗದೇ ಇರುವಂತಹ ಸಂಗತಿಯನ್ನು ನಾನು ಈ ಸದನದ ಮೂಲಕ ಮಾನ್ಯ ಸಹಕಾರ ಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನಿವೇದನೆ ಮಾಡಿಕೊಳ್ಳುತ್ತಿದ್ದೇನೆ. ಅವರು ತುಂಬಾ ಕಷ್ಟದಲ್ಲಿದ್ದಾರೆ. ತೋಟ ನೀರಿಲ್ಲದೆ ಸುಟ್ಟು ಹೋಗಿರುವಂತಹ ಈ ಸಂದರ್ಭದಲ್ಲಿ ಸುಮಾರು 50 ಸಾವಿರದಷ್ಟು ಬಡ್ಡಿಯನ್ನು ಅವರು ಕಟ್ಟಿದ್ದಾರೆ. ಅವರಿಗೆ ಈಗ ಅದನ್ನು ನಿರ್ವಹಣೆ ಮಾಡಲಿಕ್ಕೆ ಸಾಧ್ಯವಾಗದಿರುವಂತಹ ಈ ಒಂದು ಸಂದರ್ಭದಲ್ಲಿ ಅವರಿಗೆ ಬಡ್ಡಿರಹಿತವಾದಂತಹ ಸಾಲವನ್ನು ಸರ್ಕಾರ ಕೊಡಬೇಕು. ಅದರ ಜೊತೆಗೆ ಪರಿಹಾರವಾಗಿ ಅವರಿಗೆ ಸುಮಾರು 1 ಲಕ್ಷ ರೂ.ಗಳನ್ನು ಅವರಿಗೆ ಕೊಡದಿದ್ದರೆ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ, ನನ್ನಿಂದ ಬದುಕಲಿಕ್ಕೆ ಸಾಧ್ಯವಿಲ್ಲ ಎಂಬ ವಿಚಾರವನ್ನು ಅವರು ತಿಳಿಸಿರುತ್ತಾರೆ. ಸಂಬಂಧಪಟ್ಟ ಸರ್ಕಾರಕ್ಕೂ ಕೂಡ ನಾನು ಈ ಬಗ್ಗೆ ಮನವಿಯನ್ನು ಮಾಡಿದ್ದೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಮನವಿಯನ್ನು ಮಾಡಿದಾಗ, ಸಹಕಾರಿ ಸಂಘದ ಕಾಯಿದೆ ಅನ್ವಯ ಅದಕ್ಕೆ ಕೊಡಲಿಕ್ಕೆ ಬರುವುದಿಲ್ಲ ಎಂಬ ವಿಚಾರವನ್ನು ತಿಳಿಸಿದ್ದಾರೆ. ಮಾನವೀಯ ದೃಷ್ಟಿಯಿಂದ ನಾನು ಈ ಸದನದ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ಸಹಕಾರ ಮಂತ್ರಿಗಳಲ್ಲಿ ಅವರು ಕಟ್ಟಿರುವಂತಹ ಬಡ್ಡಿಯನ್ನು ಮನ್ನಾ ಮಾಡಬೇಕು. ಅದರೊಟ್ಟಿಗೆ ಅವರಿಗೆ ಸಾಧಾರಣ 1 ಲಕ್ಷದವರೆಗೆ ಬಡ್ಡಿರಹಿತವಾದಂತಹ ಸಾಲವನ್ನು ಕೊಟ್ಟು, ಅವರು ಜೀವನ ನಿರ್ವಹಣೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಅಧ್ಯಕ್ಷರು : ಸಹಕಾರ ಸಚಿವರು ಇಲ್ಲ. ಮಾನ್ಯ ಸಂಸದೀಯ ಸಚಿವರು ಈ ಬಗ್ಗೆ ಉತ್ತರ ಕೊಡಿ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಅರ್ಥ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳು ಸಮಗ್ರವಾದ ರೀತಿಯಲ್ಲಿ ಉತ್ತರ

ಕೊಟ್ಟಿದ್ದಾರೆ. ಕೆಲವೇ ನಿಮಿಷಗಳ ಹಿಂದೆ ಮಾನ್ಯ ಸದಸ್ಯರೊಬ್ಬರು ಇದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದರು. ಆಗ ಅವರು ಕೊಟ್ಟಿರತಕ್ಕಂಥ ಉತ್ತರ. ಈಗ ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕಂಥ ಆತಂಕವನ್ನು ಸಮಾಧಾನ ಪಡಿಸುತ್ತದೆಂದು ನಾನು ತಿಳಿದುಕೊಳ್ಳುತ್ತೇನೆ.

ವಿಷಯ: (ಊ) ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಗ್ರಾಹಕರ ವೇದಿಕೆಗಳಲ್ಲಿ "ಸಿ" ವರ್ಗದ ನೌಕರಿ ಸಂದರ್ಶನಕ್ಕಾಗಿ ಸಾವಿರಾರು ಅಭ್ಯರ್ಥಿಗಳನ್ನು ಕರೆಯುತ್ತಿರುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೆ, ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಗ್ರಾಹಕರ ವೇದಿಕೆಗಳಲ್ಲಿ 'ಸಿ' ವರ್ಗದ ನೌಕರಿ ಸಲುವಾಗಿ ಅಲ್ಲಿ ಇರುವ ಕೆಲವೇ ಸ್ಥಾನಗಳ ಸಲುವಾಗಿ ಸಾವಿರಾರು ಜನರನ್ನು ಇಂಟರ್ವ್ಯೂಗೆ ಕರೆದಿದ್ದಾರೆ. ಇದರಿಂದ ಬಹಳಷ್ಟು ಯುವಕರಿಗೆ ನಿರಾಶೆಯಾಗುತ್ತದೆ. ದಯವಿಟ್ಟು ನೌಕರಿ ರಿಕ್ರ್ಯೂಟ್‌ಮೆಂಟ್ ಸಲುವಾಗಿ ಏನಾದರೂ ರೂಲ್ಸ್ ಮಾಡಿ ಒಂದು ಹುದ್ದೆ ಇದ್ದರೆ ಐದು ಜನರಿಗೆ 10 ಜನರಿಗೆ ಸಂದರ್ಶನ ಕರೆದರೆ ಅಡ್ಡಿ ಇಲ್ಲ. ಒಂದು ಅವಕಾಶ ಇದ್ದರೆ 100 ಜನರಿಗೆ ಸಾವಿರ ಜನರಿಗೆ ಕರೆಯುತ್ತಾರೆ. ಈ ರೀತಿ ಜನರಿಗೆ ತೊಂದರೆಯಾಗುವ ಹಾಗೆ, ಜನರಿಗೆ ಶೋಷಣೆ ಆಗುವ ಹಾಗೆ, ಜನರಿಗೆ ನಿರಾಶೆ ಆಗುವ ಹಾಗೆ ಇರುವ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಮುಂದೆ ಇಂತಹ ತೊಂದರೆ ಯುವಕ ಯುವತಿಯರಿಗೆ ಆಗದ ಹಾಗೆ ಕಾನೂನು ಸಚಿವರು ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಕೆಲವು ಕಡೆ ಅಭ್ಯರ್ಥಿಗಳನ್ನು ಏನು ಸಂದರ್ಶನಕ್ಕಾಗಿ ಕರೆಯುತ್ತಿದ್ದಾರೆ. ಒಂದಕ್ಕೆ 10 ಅಥವಾ ಒಂದಕ್ಕೆ 20 ರೇಷಿಯೋ ಮೇಲೆ ಕರೆಯುತ್ತಿದ್ದರು. ಆದರೆ ಇತ್ತೀಚೆಗೆ ನ್ಯಾಯಾಲಯದಲ್ಲಿ ನೇಮಕ ಮಾಡತಕ್ಕಂಥದ್ದರ ಬಗ್ಗೆ ಸಂದರ್ಶನ ಕರೆಯುವಾಗ ಬಹಳ ದೊಡ್ಡ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಕರೆಯುತ್ತಿದ್ದಾರೆ, ಎಷ್ಟು ಜನ ಅರ್ಜಿ ಹಾಕುತ್ತಾರೋ ಅಷ್ಟೂ ಜನರಿಗೆ ಸಂದರ್ಶನಕ್ಕೆ ಕರೆಯುತ್ತಿದ್ದಾರೆ. ಸ್ಟೇಟ್ ಕನ್‌ಸ್ಯೂಮರ್ ಫೋರಂನಲ್ಲಿ ಸಹಿತ ಅದೇ ರೀತಿಯಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಸಂದರ್ಶನಕ್ಕೆ ಅಭ್ಯರ್ಥಿಗಳನ್ನು ಕರೆದಿದ್ದಾರೆ ಎಂದು ಈಗಾಗಲೇ ಬಹಳಷ್ಟು ಮಿತ್ರರು ಬಂದು ಸುಮಾರು 400, 500 ಮತ್ತು 600 ಕಿ.ಮಿ. ದೂರದಿಂದ ಸಾವಿರಗಟ್ಟಲೆ ಅಭ್ಯರ್ಥಿಗಳು ಬರುತ್ತಾರೆ. ಬಹಳಷ್ಟು ಖರ್ಚು ಮಾಡುತ್ತಾರೆ. ಇರುವ 10 ಹುದ್ದೆಗಳಿಗೆ ಏಕೆ ಈ ರೀತಿಯಾಗಿ ಶೋಷಣೆಗೆ ಅವಕಾಶ ಮಾಡಿ ಕೊಡುತ್ತೀರಿ ಎಂಬ ಬಗ್ಗೆ ತಮ್ಮ ಆತಂಕ ಹೇಳಿದ್ದೀರಿ, ಸನ್ಮಾನ್ಯ ಶಾಸಕರು ಹೇಳತಕ್ಕಂತಹ ಮಾತನ್ನು ಗಮನಿಸುತ್ತೇನೆ. ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಯಾವ ರೀತಿ ನಮ್ಮ ನಿರ್ದೇಶನ ಕೊಡುವುದಕ್ಕೆ ಸಾಧ್ಯವೋ ಅದನ್ನು ಪರಿಶೀಲನೆ ಮಾಡುತ್ತೇನೆ.

4. ವರದಿಗಳನ್ನೊಪ್ಪಿಸುವುದು

ಶ್ರೀ ವಿವೇಕಾನಂದ ವೈದ್ಯ (ಸಿರ್ಸಿ) (ಅಧ್ಯಕ್ಷರ ಪರವಾಗಿ) : ಮಾನ್ಯ ಅಧ್ಯಕ್ಷರೆ, ನಾನು 2004–2005ನೇ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

138-13 ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.